ನೆಲ ಸಂಸ್ಕೃತಿಯ ನಡೆ...

# ಆದಿಮ ಸಾಂಸ್ಕೃತಿಕ ಕೇಂದ್ರ

## Adima Cultural Center

ಶಿವಗಂಗೆ, ತೇರಹಳ್ಳಿ ಬೆಟ್ಟ, ಕೋಲಾರ-563130



ಕ್ರಾಂತಿ ಜ್ಯೋತಿ, ಅಕ್ಷರದವ್ವ

## ಸಾವಿತ್ರಿಬಾಯಿ ಫುಲೆ

ಜಯಂತಿ ಅಂಗವಾಗಿ

## ಹುಣ್ಣಿಮೆ ಹಾಡು-225

03 ಜನವರಿ 2025 ಶನಿವಾರ



ಕಾರ್ಯಕ್ರಮದ ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಡುವುದರ ಜೊತೆಗೆ ಆದಿಮಕ್ಕೆ ಅವರು ನೀಡಿದ ಸೇವೆಯನ್ನು ಸ್ಮರಿಸುತ್ತಾ ಈ ಹುಣ್ಣಿಮೆ ಹಾಡು ಕಾರ್ಯಕ್ರಮಕ್ಕೆ ಬಂದಿದ್ದ ಅತಿಥಿಗಳಿಗೆ ಆದಿಮ ಕಾರ್ಯದರ್ಶಿ ಹ.ಮಾ.ರಾಮಚಂದ್ರ ಅವರು ಸ್ವಾಗತವನ್ನು ಕೋರಿದರು.

**ಕಾರ್ಯಕ್ರಮದಲ್ಲಿ ಅತಿಥಿಗಳ ಮಾತು, ನಾಟಕ ಪ್ರದರ್ಶನ, ಬೆಟ್ಟದ ಬಸ್ಸಿನ ಚಾಲಕ ನಿರ್ವಾಹಕರನ್ನು ಗೌರವಿಸಿ ಸನ್ಮಾನಿಸಲಾಯಿತು**

## ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ಜನುಮ ದಿನದ ಅಂಗವಾಗಿ

# 225ನೇ ಹುಣ್ಣಿಮೆ ಹಾಡು

**ದಿನಾಂಕ: 03.01.2026 ರಂದು ತೇರಹಳ್ಳಿ ಬೆಟ್ಟದ ಶಿವಗಂಗೆಯ ಆದಿಮ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಿತು.**



ಬೆಟ್ಟದ ಬಸ್ಸಿನ ಚಾಲಕ ಸಯ್ಯದ್ ಬಾಬಾಜಾನ್ ಹಾಗೂ ನಿರ್ವಾಹಕ ಸುಬ್ರಮಣಿ ಅವರನ್ನು ಆದಿಮ ಸಂಸ್ಥೆ ಸನ್ಮಾನಿಸಿ ಗೌರವಿಸಿತು.









ಕ.ರಾ.ರ.ಸಾ.ನಿಗಮ, ಕೋಲಾರ ವಿಭಾಗದ ವಿಭಾಗೀಯ ಯಾಂತ್ರಿಕ ಅಭಿಯಂತರರಾದ ಕವಿ, ಗೀತರಚನೆಕಾರ ಹಾಗೂ ರಂಗಭೂಮಿ ಕಲಾವಿದರಾದ **ಶಾಂತಕುಮಾರ್ ಹೆಚ್.ಎಸ್** ಮಾತನಾಡಿದರು.

ಕ.ರಾ.ರ.ಸಾ.ನಿಗಮ, ಕೋಲಾರ ವಿಭಾಗದ ವಿಭಾಗೀಯ ಯಾಂತ್ರಿಕ ಅಭಿಯಂತರ. ಕವಿ, ಗೀತರಚನೆಕಾರ ಹಾಗೂ ರಂಗಭೂಮಿ ಕಲಾವಿದರಾದ ಶಾಂತಕುಮಾರ್ ಹೆಚ್.ಎಸ್. ಸಾವಿತ್ರಿಬಾಯಿ ಫುಲೆ ಅವರ ಜನುಮದಿನದ ಶುಭಾಶಯಗಳು ತಿಳಿಸಿ, ಅವರ ಹುಟ್ಟು, ಬೆಳವಣಿಗೆ, ಜೀವನದಲ್ಲಿ ಕೈಗೊಂಡ ಅಕ್ಷರ ಚಳವಳಿಯ ಪ್ರಸಂಗಗಳನ್ನು ಮೆಲುಕು ಹಾಕಿಕೊಂಡರು. ಬಾಲ್ಯದಲ್ಲೇ ಅವರಿಗಿದ್ದ ಧೈರ್ಯ ಮತ್ತು ಆತ್ಮವಿಶ್ವಾಸ ಮುಂದಿನ ಹಾದಿಯನ್ನು ರೂಪಿಸಿತ್ತು ಎಂದು ಹೇಳಿದರು. 1831 ಜನವರಿ 3ನೇ ತಾರೀಖು ಜನಿಸಿದ ಸಾವಿತ್ರಿಬಾಯಿ ತನ್ನ 9 ನೇ ವಯಸ್ಸಿನಲ್ಲಿ ಜ್ಯೋತಿಬಾ ಫುಲೆ ಅವರೊಂದಿಗೆ ವಿವಾಹವಾಗುತ್ತಾರೆ. ಅಂದಿನ ಇಂಗ್ಲೀಷ್ ಮಿಷನರಿಗಳು ಸ್ಥಾಪಿಸಿದ್ದ ಶಾಲೆಯಲ್ಲಿ ವ್ಯಾಸಂಗ ಮಾಡಿ ವಿದ್ಯಾವಂತರಾಗಿದ್ದ ಅದರಲ್ಲೂ ವಿಶೇಷವಾಗಿ ಇಂಗ್ಲೀಷ್ ಪಾಂಡಿತ್ಯಗಳಿಸಿದ್ದ ಜ್ಯೋತಿಬಾ ಫುಲೆ ಅನೇಕ ಸಮಾಜ ಕಾರ್ಯಗಳನ್ನು ಮಾಡಲು ತೊಡಗಿಸಿಕೊಂಡರು. ಸರಿಸಾಟಿ ಸಹಕಾರ ನೀಡಿದ ಸಾವಿತ್ರಿಬಾಯಿ ಫುಲೆಯವರ ವಿಶಾಲ ಮನೋಭಾವ ಮತ್ತು ಪ್ರಬುದ್ಧತೆಯನ್ನು ಅರಿತು ಅವರಿಗೆ ಮನೆಯಲ್ಲೇ ಶಿಕ್ಷಣ ಕೊಡಲು ಆರಂಭಿಸಿದರು. ಶಿಕ್ಷಕಿಯಾಗುವ ಮಟ್ಟಕ್ಕೆ ಬೆಳೆಸಿ, ಮೊದಲು ಹೆಣ್ಣು ಮಕ್ಕಳಿಗೆ ಶಾಲೆ ತೆರೆದು ಹಾಗೆಯೇ ವಿಸ್ತರಿಸಿಕೊಂಡು, ರಾತ್ರಿ ಶಾಲೆ, ಬೇರೆ ಬೇರೆ ಊರುಗಳಲ್ಲಿ ಶಾಲೆಗಳನ್ನು ತೆರೆದು ನಡೆಸಿದರು. 180 ವರ್ಷಗಳ ಹಿಂದೆ ಈ ದೇಶದಲ್ಲಿ ಲಿಂಗ ತಾರತಮ್ಯ, ಜಾತಿ ಧರ್ಮ ತಾರತಮ್ಯಗಳಿಂದ ತತ್ತರಿಸಿ ಹೋಗಿದ್ದ ಮಹಿಳೆ ಹಾಗೂ ನಿಮ್ನ ವರ್ಗದ ಜನರಿಗೆ ಬೆಳಕಾಗಿ ಮಹಾರಾಷ್ಟ್ರದ ಸತಾರದಲ್ಲಿ ಹುಟ್ಟಿದ್ದು ಸಾವಿತ್ರಿಬಾಯಿ ಫುಲೆ. ಅಕ್ಷರವನ್ನು ಮಡಿವಂತಿಕೆಯ ಸಂಪ್ರದಾಯದ ಹೆಸರಲ್ಲಿ ವಂಚಿಸಿ ಮಹಿಳೆಯನ್ನು ಶಿಕ್ಷಣದಿಂದ ದೂರವಿರಿಸಿದ್ದ ಈ ದೇಶದ ವ್ಯವಸ್ಥೆಯನ್ನು ಫುಲೆ ದಂಪತಿಗಳು ಒಪ್ಪಿಕೊಳ್ಳಲಿಲ್ಲ ಹಾಗೂ ಆ ಹಿನ್ನೆಲೆಯಲ್ಲಿ ಮೇಲ್ವರ್ಗದ ಒಂದು ಸಮುದಾಯ

ನಾನಾ ಚಿತ್ರಹಿಂಸೆಗಳು ಕೊಡಲು ಪ್ರಯತ್ನಿಸುತ್ತಾರೆ. ಸಾವಿತ್ರಿಬಾಯಿ ಫುಲೆ ಶಾಲೆಗೆ ಹೋಗುವ ಮಾರ್ಗದಲ್ಲಿ ಅಂದಿನ ಮೇಲ್ವರ್ಗದ ಜನ ಸಗಣಿ ಎಸೆದು ವಿರೋಧ ವ್ಯಕ್ತಪಡಿಸುತ್ತಿದ್ದರು. ಆ ಕಾರಣದಿಂದ ಶಾಲೆಯ ಬಳಿಗೆ ಹೋಗಿ ಮತ್ತೊಂದು ಸೀರೆ ಉಟ್ಟು ಧೃತಿಗೆಡದೇ ಅವರ ಚಳವಳಿ ಮುಂದುವರೆಸುತ್ತಾರೆ. ಅವರ ಹೆಸರಲ್ಲಿ ಆದಿಮ ಇವತ್ತು 225ನೇ ಹುಣ್ಣಿಮೆ ಹಾಡು ನಡೆಸಿಕೊಳ್ಳುತ್ತಿದೆ ಎಲ್ಲರಿಗೂ ಶುಭವಾಗಲಿ ಎಂದರು.





ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಕುಲಸಚಿವರಾದ **ಡಾ. ಮುನಿನಾರಾಯಣ.ಸಿ** ಮಾತನಾಡಿದರು.

ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಕುಲಸಚಿವರು ಆದ **ಡಾ. ಮುನಿನಾರಾಯಣ.ಸಿ** ಮಾತನಾಡುತ್ತಾ ಆದಿಮದಲ್ಲಿ ಪ್ರತಿ ತಿಂಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುವುದು ಗೊತ್ತಿತ್ತು. ಆದರೆ ಕೆಲಸದ ಒತ್ತಡವಿದ್ದ ಕಾರಣ ಬರಲು ಆಗಿರಲಿಲ್ಲ. ಇವತ್ತು ಇಲ್ಲಿ ಬಂದು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ಬಹಳ ಸಂತೋಷವಾಗಿದೆ. ನಾವು ಪ್ರತಿ ವರ್ಷವೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಸುತ್ತೇವೆ. ಬೇರೆ ಬೇರೆ ಬಾಗಗಳಿಂದ ತಂಡಗಳನ್ನು ಕರೆಸಿಕೊಳ್ಳುತ್ತಿದ್ದೆವು. ಆದಿಮ ಕೇಂದ್ರ ಅಧ್ಯಕ್ಷ ಎನ್. ಮುನಿಸ್ವಾಮಿಯವರನ್ನು ಭೇಟಿಯಾಗಿ ಕೇಳಿದಾಗ ಇಲ್ಲಿನ ತಂಡ ಕಳುಹಿಸಿಕೊಟ್ಟಿದ್ದರು. ಕಾರ್ಯಕ್ರಮ ಚೆನ್ನಾಗಿ ಮೂಡಿಬಂತು. ಆದಿಮದೊಂದಿಗೆ ನಾವು ಇರುತ್ತೇವೆ ಎಂದು ಹೇಳಿದರು.

ವೇದಿಕೆಯಲ್ಲಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಆರ್.ಹನುಮಂತರಾಯ ಅವರು ಆದಿಮಕ್ಕೆ ಬೇಕಾದ ಅಗತ್ಯ ನೆರವು ನೀಡುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

'ಮ್ಯಾಕ್‌ಬೆತ್' ನಾಟಕದ ಕನ್ನಡ ಅನುವಾದಕರಾದ ರಾಮಚಂದ್ರ ದೇವ ಅವರ ಪತ್ನಿಯಾದ ಪ್ರೊ. ಶಶಿಕಲಾ ದೇವ. ಎ, ನಿವೃತ್ತ ಪ್ರಾಧ್ಯಾಪಕಿ ಮೈಸೂರು ಅವರು ಆದಿಮ ರಂಗಭೂಮಿ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಗೆ ರಾಮಚಂದ್ರ ದೇವ ಅವರು ಬರೆದಿರುವ ಹಲವಾರು ನಾಟಕ ಪುಸ್ತಕಗಳನ್ನು ತಂದು ಕೊಟ್ಟಿದ್ದಾರೆ.

**ಶ್ರೀಮತಿ ಹೆಚ್. ರತ್ನಮ್ಮ ನಾಗರಾಜ್.ವಿ,** ದೊಡ್ಡವಲಗಮಾದಿ ಗ್ರಾಮ ಪಂಚಾಯಿತಿ, ಕಾರ್ಯದರ್ಶಿ ಅವರು ತಮ್ಮ ಪತಿಯವರ ನೆನಪಿನಲ್ಲಿ ಆದಿಮ ರಂಗಭೂಮಿ ಶಿಕ್ಷಣ ಕೇಂದ್ರಕ್ಕೆ ತುಂಬಾ ಅಗತ್ಯವಾಗಿ ಬೇಕಾಗಿದ್ದ ಪವರ್ ಹೊಲಿಗೆಯಂತ್ರ ಸುಮಾರು 28000 ರೂಪಾಯಿಗಳ ವೆಚ್ಚದಲ್ಲಿ ಕೊಡುಗೆಯಾಗಿ ನೀಡಿದ್ದಾರೆ. ಈ ಹುಣ್ಣಿಮೆ ಹಾಡು ಕಾರ್ಯಕ್ರಮದಲ್ಲಿ ಅವರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಬೆಟ್ಟದ ಬಸ್ಸಿನ ಚಾಲಕ ಸಯ್ಯದ್ ಬಾಬಾಜಾನ್ ಹಾಗೂ ನಿರ್ವಾಹಕ ಸುಬ್ರಮಣಿ ಅವರನ್ನು ಆದಿಮ ಸಂಸ್ಥೆ ಸನ್ಮಾನಿಸಿ ಗೌರವಿಸಿತು.

ಕಾರ್ಯಕ್ರಮ ನಿರೂಪಣೆ ಕೆ.ವಿ.ಕಾಳಿದಾಸ್, ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಡುವುದರ ಜೊತೆಗೆ ಆದಿಮಕ್ಕೆ ಅವರು ನೀಡಿದ ಸೇವೆಯನ್ನು ಸ್ಮರಿಸುತ್ತಾ ಈ ಹುಣ್ಣಿಮೆ ಹಾಡು ಕಾರ್ಯಕ್ರಮಕ್ಕೆ ಬಂದಿದ್ದ ಅತಿಥಿಗಳಿಗೆ ಆದಿಮ ಕಾರ್ಯದರ್ಶಿ ಹ.ಮಾ.ರಾಮಚಂದ್ರ ಸ್ವಾಗತವನ್ನು ಕೋರಿದರು, ವಂದನಾರ್ಪಣೆ ಹಾಗೂ ಸನ್ಮಾನಿತರ ಪರಿಚಯವನ್ನು ನಾವೆಂಕಿ ಕೋಲಾರ ನಡೆಸಿಕೊಟ್ಟರು.

**ಆದಿಮದಲ್ಲಿ ವಿಜೃಂಭಿಸಿದ ಶೇಕ್ಸ್‌ಪಿಯರ್ ನಾಟಕ..**

ಜಗತ್ತಿನ ಪ್ರಸಿದ್ಧ ನಾಟಕಕಾರ ಶೇಕ್ಸ್‌ಪಿಯರ್ ರಚನೆಯ, ಕನ್ನಡ ಅನುವಾದ ಡಾ.ರಾಮಚಂದ್ರ ದೇವ ಕಲ್ಮಡ್ಕ 'ಮ್ಯಾಕ್‌ಬೆತ್' ನಾಟಕ ಉತ್ತಮ ರಂಗಸಜ್ಜಿಕೆ, ವಸ್ತ್ರ ವಿನ್ಯಾಸದೊಂದಿಗೆ ಅದ್ಭುತವಾಗಿ ಮೂಡಿಬಂದಿತು. ನಾಟಕ ನಿರ್ದೇಶನ, ವಿನ್ಯಾಸ; ಗ.ನ.ಅಶ್ವತ್, ವಸ್ತ್ರ ವಿನ್ಯಾಸ; ಜಗದೇಶ್ ಆರ್ ಜಾಣಿ, ಸಂಗೀತ ನಿರ್ವಹಣೆ; ತುರಾಂಡಹಳ್ಳಿ ಶ್ರೀನಿವಾಸ್, ಬೆಳಕು ನಿರ್ವಹಣೆ; ಆದಿಮ ರಂಗಶಿಕ್ಷಣ ವಿದ್ಯಾರ್ಥಿಗಳು, ಪ್ರಸಾಧನ; ಎಸ್.ಮೋಹನ್ ಕುಮಾರ್ ಬೆಂಗಳೂರು. ಅಭಿನಯಿಸಿದವರು ಆದಿಮ ರಂಗ ಶಿಕ್ಷಣ ಕೇಂದ್ರ ವಿದ್ಯಾರ್ಥಿಗಳು.

ಕಾರ್ಯಕ್ರಮಲ್ಲಿ ಆದಿಮ ಅಧ್ಯಕ್ಷರಾದ ಎನ್.ಮುನಿಸ್ವಾಮಿ, ಆಡಳಿತಾಧಿಕಾರಿ ರಮೇಶ್ ಅಗ್ರಹಾರ, ನಾಯಕ್, ನಾರಾಯಣಸ್ವಾಮಿ ಇದ್ದರು.




















ಆದಿಮ ಸಾಂಸ್ಕೃತಿಕ ಕೇಂದ್ರ
Adima Cultural Center
ಶಿವಗಂಗೆ, ತೇರಹಳ್ಳಿ ಬೆಟ್ಟ, ಕೋಲಾರ-563130
ಕ್ರಾಂತಿ ಜ್ಯೋತಿ, ಅಕ್ಷರದವ್ವ
ಸಾವಿತ್ರಿಬಾಯಿ ಫುಲೆ
ಜಯಂತಿ ಅಂಗವಾಗಿ
ಹುಣ್ಣಿಮೆ ಹಾಡು-225
03 ಜನವರಿ 2026 ಶನಿವಾರ
ಸಂಜೆ: 7-00 ಕ್ಕೆ
ಆದಿಮ ರಂಗಭೂಮಿ ಶಿಕ್ಷಣ ಕೇಂದ್ರದ
ವಿದ್ಯಾರ್ಥಿಗಳು ಪ್ರಸ್ತುತಿಪಡಿಸುವ ನಾಟಕ
ಶೇಕ್ಸ್ ಪಿಯರ್‌ನ.....
ಮ್ಯಾಕ್‌ಬೆತ್
ಅನುವಾದ: ಡಾ. ರಾಮಚಂದ್ರ ದೇವ, ಕಲ್ಲಡ್ಕ
ನಿರ್ದೇಶನ ಮತ್ತು ವಿನ್ಯಾಸ: ಗ. ನ. ಅಶ್ವತ್ಥ್, ನೀನಾಸಂ, ಎಂಎ (ಮಾಸ್ಟರ್ ಆಫ್ ಡ್ರಾಮಾ)
ವಸ್ತ್ರ ವಿನ್ಯಾಸ: ಜಗದೀಶ್ ಆರ್. ಜಾಣಿ, ಎನ್‌ಎಸ್‌ಡಿ
ಸಂಗೀತ ನಿರ್ವಹಣೆ: ತುರಾಂಡಳ್ಳಿ ಶ್ರೀನಿವಾಸ್
ಬೆಳಕು ನಿರ್ವಹಣೆ: ಆದಿಮ ರಂಗಭೂಮಿ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು
ಪ್ರಸಾಧನ: ಎಸ್. ಮೋಹನ್ ಕುಮಾರ್, ಬೆಂಗಳೂರು
ರಂಗಾಭಿನಯದಲ್ಲಿ: ಆದಿಮ ರಂಗಭೂಮಿ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು
ಸನ್ಮಾನಿತರು
ಶ್ರೀ ಸಯ್ಯದ್ ಬಾಬಾಜಾನ್
ಚಾಲಕ, ಬಿ.ಸಂ.2150
ಶ್ರೀ ಸುಬ್ರಮಣಿ
ಚಾಲಕ/ನಿರ್ವಾಹಕ, ಬಿ.ಸಂ.3769
ಕ.ರಾ.ರ.ಸಾ.ನಿಗಮ, ಕೋಲಾರ ವಿಭಾಗ
ಕೋಲಾರ ಘಟಕ
ನಮ್ಮೊಂದಿಗೆ
ಡಾ|| ಮುನಿನಾರಾಯಣ .ಸಿ
ಕುಲಸಚಿವರು
ಶ್ರೀ ದೇವರಾಜ ಅರಸು ವೈದ್ಯಕೀಯ ವಿದ್ಯಾಲಯ,
ಟಮಕ, ಕೋಲಾರ
ಶ್ರೀ ಆರ್. ಹನುಮಂತರಾಯ
ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು
ಕೋಲಾರ ಜಿಲ್ಲೆ, ಕೋಲಾರ
ಶ್ರೀ ಶಾಂತಕುಮಾರ್ .ಹೆಚ್.ಎಸ್
ವಿಭಾಗೀಯ ಯಾಂತ್ರಿಕ ಅಭಿಯಂತರರು
ಕ.ರಾ.ರ.ಸಾ.ನಿಗಮ, ಕೋಲಾರ ವಿಭಾಗ
ಪ್ರೊ. ಎ. ಶಶಿಕಲಾ ದೇವ
ನಿವೃತ್ತ ಪ್ರಾಧ್ಯಾಪಕರು, ಮೈಸೂರು
ಶ್ರೀಮತಿ ಹೆಚ್. ರತ್ನಮ್ಮ ನಾಗರಾಜ್
ಕಾರ್ಯದರ್ಶಿ, ದೊಡ್ಡವಲಗಮಾದಿ ಗ್ರಾಮ ಪಂಚಾಯಿತಿ,
ಬಂಗಾರಪೇಟೆ ತಾಲ್ಲೂಕು
ಎನ್. ಮುನಿಸ್ವಾಮಿ
ಅಧ್ಯಕ್ಷರು
9449073119
ಹ.ಮಾ. ರಾಮಚಂದ್ರ
ಕಾರ್ಯದರ್ಶಿ
9449041430
ಕೆ.ಎಸ್.ಆರ್.ಟಿ.ಸಿಯಿಂದ ವಿಶೇಷ ಬಸ್ ವ್ಯವಸ್ಥೆ: ಆದಿಮದಲ್ಲಿ ನಡೆಯುವ ಹುಣ್ಣಿಮೆ ಹಾಡು ಕಾರ್ಯಕ್ರಮಕ್ಕೆ ಕೋಲಾರ ಬಸ್ ನಿಲ್ದಾಣದಿಂದ ಸಂಜೆ 6 ಗಂಟೆಗೆ ಬಸ್ ಹೊರಡಲಿದ್ದು, ಕಾರ್ಯಕ್ರಮ ಮುಗಿದ ಮೇಲೆ ಕೋಲಾರ ಬಸ್ ನಿಲ್ದಾಣಕ್ಕೆ ಬರಲಿದೆ.
e-Mail: adimakolar1995@gmail.com
website: www.adimaculturalcentre.in
ಬನ್ನಿ ಜೊತೆಗೂಡಿ...

